**ದಿನಾಂಕಃ 18.12.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

**8**. ಆರೋಪಿ 2019 ರಲ್ಲಿ ವ್ಯವಹಾರಿಕವಾಗಿ ಪರಿಚಯವಾದರು. ವ್ಯವಹಾರಿಕವಾಗಿ ಯಾವ ರೀತಿ ಪರಿಚಯ ಎಂದರೆ ನಾನು ಕಟ್ಟಡ ನಿರ್ಮಾಣದ ಸರಕುಗಳನ್ನು ಸರಬರಾಜು ಮಾಡುತ್ತಿದ್ದೆನು, ಆ ಮೂಲಕ ಆರೋಪಿ ಪರಿಚಯವಾದರು. 2019 ರಲ್ಲಿ ಆರೋಪಿಗೆ ಸಂಬಂಧಿಸಿದ ಯಾವ ಆಸ್ತಿಗೆ ಸಂಬಂಧಿಸಿದಂತೆ ಕಟ್ಟಡ ಸರಕುಗಳನ್ನು ಸರಬರಾಜು ಮಾಡಿದ್ದೀರಿ ಎಂದರೆ ಸಾಕ್ಷಿಯು ಕೆ.ಆರ್. ಪುರಂನ ಆಸ್ತಿಗೆ ಸಂಬಂಧಿಸಿದಂತೆ ಸರಕುಗಳನ್ನು ಸರಬರಾಜು ಮಾಡಿದ್ದೆನು ಎಂದು ನುಡಿಯುತ್ತಾರೆ. ಆರೋಪಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಡೆಲಿವರಿ ಬಿಲ್ಲುಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ಆರೋಪಿ ಬಿಲ್ಲುಗಳಿಗೆ ಸಹಿ ಮಾಡಿಕೊಟ್ಟಿದ್ದಾರೆಯೇ ಎಂದರೆ ಆರೋಪಿಯ ಚಾನೆಲ್‌ನಲ್ಲಿ ಕೆಲಸ ಮಾಡುತ್ತಿರುವವರು ಸಹಿ ಮಾಡಿ ಕೊಟ್ಟಿರುತ್ತಾರೆ. ಆರೋಪಿ ಸಹಿ ಮಾಡಿದ ಯಾವುದಾದರೂ ಬಿಲ್ಲು ಅಥವಾ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಆರೋಪಿ ಆ ಸಮಯದಲ್ಲಿ ಚಾನೆಲ್‌ನ ಒಳಗಡೆ ಇದ್ದರು, ಆ ಕಾರಣ ಕಚೇರಿಯವರು ಸೀಲು ಮತ್ತು ಸಹಿ ಹಾಕಿ ನೀಡಿದರು ಎಂದು ನುಡಿಯುತ್ತಾರೆ. ಯಾರು ಸಹಿ ಮಾಡಿಕೊಟ್ಟರು ಎಂದು ನನಗೆ ಈಗ ಹೇಳಲಾಗುವುದಿಲ್ಲ, ಕಚೇರಿಯಲ್ಲಿರುವ ಮಹಿಳೆಯೊಬ್ಬರು ಸಹಿ ಮಾಡಿಕೊಟ್ಟರು.

**9.** 2020 ನೇ ಇಸವಿಯಲ್ಲಿಯೂ ಸಹ ಆರೋಪಿಗೆ ಕಟ್ಟಡ ಸಾಮಾಗ್ರಿಗಳ ಸರಬರಾಜು ಮಾಡಿದೆನು. 2020 ನೇ ಇಸವಿಯಲ್ಲಿ ನಡೆದಂತಹ ವ್ಯವಹಾರಕ್ಕೆ ಸಂಬಂದಿಸಿದಂತೆ ಕೆ.ಆರ್ ಪುರಂ ಪೊಲೀಸ್ ಠಾಣೆಯಲ್ಲಿ ನಾನು ದೂರು ನೀಡಿದ್ದೆನು. ಆ ದೂರಿನಲ್ಲಿ ಚೆಕ್ಕು ನಂಬರ್ 000466 ಮತ್ತು 000022 ಗಳನ್ನು ನಮೂದು ಮಾಡಿರುತ್ತೀರಿ ಎಂದರೆ ಸರಿ. 2023 ನೇ ಇಸವಿಯಲ್ಲಿ ಮೇಲ್ಕಂಡ ಚೆಕ್ಕು ನಂಬರ್ ಗಳಿಗೆ ಸಂಬಂಧಿಸಿದಂತೆ ಪ್ರಕರಣ ದಾಖಲಿಸಿರುತ್ತೇನೆ

ಎಂದರೆ ಸರಿ. ಆ ಮೇಲ್ಕಂಡ ಎರಡು ಚೆಕ್ಕಗಳು 2020 ರಲ್ಲಿ ನೀಡಿದಂತಹ ಚೆಕ್ಕುಗಳು ಎಂದರೆ ಸರಿ. 2023 ನೇ ಇಸವಿಯಲ್ಲಿ ಹಣ ಪಡೆದುಕೊಂಡು ಚೆಕ್ಕು ನೀಡಿದಂತೆ ನೀವು ಪ್ರಕರಣ ದಾಖಲಿಸಿದ್ದೀರಿ ಎಂದರೆ ಸರಿಯಲ್ಲ. ಆರೋಪಿಯ ವಿರುದ್ದ ಬೇರೆ ಚೆಕ್ಕಿಗೆ ಸಂಬಂಧಿಸಿದಂತೆ ಬೇರೆ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿರುತ್ತೀರಿ ಎಂದರೆ ಸರಿ.

**10**. ನಿ.ಪಿ.1 ಅನ್ನು ಆರೋಪಿ 2020 ರಲ್ಲಿ ಸಹಿ ಮಾಡಿ ನೀಡಿರುತ್ತಾರೆ ಎಂದರೆ ಸರಿ. ನಿ.ಪಿ.1 ರಲ್ಲಿನ ಸಹಿ ಹಾಗೂ ಇತರೆ ಬರವಣಿಗೆ ಮತ್ತು ಶಾಯಿಯಲ್ಲಿ ವ್ಯತ್ಯಾಸವಿದೆ ಎಂದರೆ ಸಾಕ್ಷಿಯು ಎರಡು ಪೆನ್ನುಗಳಲ್ಲಿ ಬರೆದುಕೊಟ್ಟರು ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿನ ಹೆಸರಿನ ಶಾಯಿಯಲ್ಲಿ ವ್ಯತ್ಯಾಸವಿದೆ ಎಂದರೆ ಸಾಕ್ಷಿಯು ಆರೋಪಿ ಬರೆದುಕೊಟ್ಟಿನ್ನು ನಾನು ತೆಗೆದುಕೊಂಡಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.1 ರಲ್ಲಿನ ಬರವಣಿಗೆಯನ್ನು ಆರೋಪಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 2023 ನೇ ಇಸವಿಯಲ್ಲಿ ನಿಮಗು ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರವಾಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ವ್ಯವಸಾಯ ಮಾಡುತ್ತೇನೆ. ನಾನು ತೆರಿಗೆ ಪಾವತಿದಾರನಾಗಿರುವುದಿಲ್ಲ. ನಾನು ಸಿಎಂಪಿ ಮಂಡಿಯಿಂದ 15 ಲಕ್ಷ ರೂ.ಗಳನ್ನು ತಂದಿದ್ದೆನು, ಅದರಲ್ಲಿ ಆರೋಪಿಗೆ 10 ಲಕ್ಷ ರೂ. ಹಾಗೂ ರೂ.2,80,000/- ಗಳನ್ನು ನೀಡಿದೆನು. ಸಿಎಂಪಿ ಮಂಡಿಯಿಂದ ಹಣ ತಂದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮ್ಮ ವಕೀಲರಿಗೆ ನೀಡಿದ್ದೇನೆ ಎಂದು ನುಡಿಯುತ್ತಾರೆ. 2023 ನೇ ಇಸವಿಯಲ್ಲಿ ಸಿಎಂಪಿ ಮಂಡಿಯಿಂದ ಹಣ ತಂದು ಆರೋಪಿಗೆ ನೀಡಿದ್ದೆನು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೇಲ್ಕಂಡ ವಿಷಯವನ್ನು ನಿಮ್ಮ ನೋಟೀಸಿನಲ್ಲಿ ನಮೂದಿಸಿರುವುದಿಲ್ಲ ಎಂದರೆ ನಮ್ಮ ವಕೀಲರಿಗೆ ತಿಳಿಸಿದ್ದೆನು ಎಂದು ನುಡಿಯುತ್ತಾರೆ. ನಿಮ್ಮ ವಕೀಲರಿಗೆ ಅವರಿಗೆ ಆ ರೀತಿ ಯಾವುದೇ ಮಾಹಿತಿ ನೀಡದಿದ್ದರೂ

ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. 2023 ನೇ ಇಸವಿಯಲ್ಲಿ ನಿಮ್ಮ ಹಾಗೂ ಆರೋಪಿಯ ನಡುವೆ ಯಾವುದೇ ವ್ಯವಹಾರವಾಗಿರುವುದಿಲ್ಲ, ಆರೋಪಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯತ್ತಿದ್ದೀರಿ ಎಂದರೆ ಸರಿಯಲ್ಲ.

**11.** ಕೆ.ಆರ್.ಪುರಂ ನಲ್ಲಿ ಆರೋಪಿಗೆ ಸಂಬಂಧಿಸಿದಂತೆ ಯಾವುದೇ ಆಸ್ತಿ ಇರುವುದಿಲ್ಲ ಎಂದರೆ ಸರಿಯಲ್ಲ. ನೀವು ವಿವಾದಿತ ಚೆಕ್ಕನ್ನು ಬ್ಯಾಂಕಿಗೆ ಹಾಜರುಪಡಿಸುವ ಪೂರ್ವದಲ್ಲಿಯೇ ಅಂದರೆ 2020 ನೇ ಇಸವಿಯಲ್ಲಿಯೇ ಖಾತೆ ಮುಕ್ತಾಯಗೊಳಿಸುವಂತೆ ಕೋರಿ ಆರೋಪಿ ಅರ್ಜಿ ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುಳಬಾಗಿಲಿನ ನನ್ನ ವಿಳಾಸಕ್ಕೆ ಸಂಬಂಧಿಸಿದಂತೆ ಆಧಾರ್ ಕಾರ್ಡ್ ಇರುತ್ತದೆ, ದೂರಿನಲ್ಲಿರುವ ವಿಳಾಸಕ್ಕೆ ಸಂಬಂಧಿಸಿದಂತೆ ಯಾವುದೇ ದಾಖಲೆ ಇರುವುದಿಲ್ಲ. ವ್ಯವಹಾರ ನಡೆದ ಸ್ಥಳಕ್ಕೆ ಸಂಬಂಧಿಸಿದಂತೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ವಕೀಲರಿಗೆ ನೀಡಿರುತ್ತೇನೆ, ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿಯ ವಿರುದ್ದ ಸಲ್ಲಿಸಿರುವ ಬೇರೆ ಪ್ರಕರಣದಲ್ಲಿ ನಿಮ್ಮ ವಿಳಾಸವನ್ನು ಬೇರೆ ನಮೂದಿಸಿರುತ್ತೀರಿ ಎಂದರೆ ಸರಿಯಲ್ಲ. ನಾನು ಬ್ಯಾಂಕಿನ ಮುಖಾಂತರ ಅಷ್ಟಾಗಿ ವ್ಯವಹರಿಸುವುದಿಲ್ಲ. ಆರೋಪಿಗೆ ಚೆಕ್ಕಿನ ಮುಖಾಂತರ ಹಣ ನೀಡಬಹುದಾಗಿತ್ತು ಎಂದರೆ ಆರೋಪಿಯ ಕೋರಿಕೆಯ ಮೇರೆಗೆ ನಗದಾಗಿ ನೀಡಿದ್ದೆನು. ಈ ವಿಷಯವನ್ನು ನೋಟೀಸಿನಲ್ಲಿ ತಿಳಿಸಲು ತೊಂದರೆ ಇತ್ತ ಎಂದರೆ ನಮ್ಮ ವಕೀಲರಿಗೆ ತಿಳಿಸಿದೆನು ಎಂದು ನುಡಿಯುತ್ತಾರೆ. ವಕೀಲರಿಗೆ ಆ ರೀತಿ ತಿಳಿಸಿರಲಿಲ್ಲ ಎಂದರೆ ಸರಿಯಲ್ಲ. ಸರಕುಗಳನ್ನು ಸರಬರಾಜು ಮಾಡಿರುವ ಬಗ್ಗೆ ಕರಾರು ಮಾಡಿಕೊಂಡಿದ್ದೀರಾ ಎಂದರೆ ಆರೋಪಿಯ ಗಂಡ ಎಂ.ಓ.ಯು ಬರೆದುಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿ ಹಾಗೂ ನಿಮ್ಮ ನಡುವೆ ಯಾವುದೇ ಹಣಕಾಸಿನ ವ್ಯವಹಾರವಾಗದಿದ್ದರೂ ಸಹ 2023 ನೇ ಇಸವಿಯಲ್ಲಿ ಹಣ ನೀಡಿರುತ್ತೇನೆ ಎಂದು

ಸುಳ್ಳು ಸಾಕ್ಷಿ ನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ. ಆರೋಪಿಗೆ ಹಣಕಾಸಿನ ಸಹಾಯ ಮಾಡಿರಲಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**( ಶ್ರೀಮತಿ. ನಿರ್ಮಲ ಎಂ.ಸಿ)**
ಎಸಿಜೆಎಂ ನ್ಯಾಯಾಧೀಶರು
ಲಘು ವ್ಯವಹಾರಗಳ ನ್ಯಾಯಾಲಯ
ಬೆಂಗಳೂರು.